ಮಾನದಂಡಗಳು:

1. 5.00 ಎಕರೆಗಿಂತ ಕಡಿಮೆ ಖುಷ್ಕಿ ಜಮೀನು ಅಥವಾ ತತ್ಸಮಾನ ತರೀ ಅಥವಾ ಭಾಗಾಯ್ತು ಜಮೀನು ಹೊಂದಿರುವ ಕುಟುಂಬಗಳು.
2. ಒಂದು ಲಕ್ಷ ರೂ.ಗಳವರೆಗೆ ಯಾವುದೇ ಸಹಕಾರಿ ಅಥವಾ ರಾಷ್ಟ್ರೀಕೃತ / ಗ್ರಾಮೀಣ ಬ್ಯಾಂಕುಗಳಲ್ಲಿ ಸಾಲ ಪಡೆಯದವರು.
3. ಯಾವುದೇ ಕಾರ್ಯ ನಿರ್ವಹಿಸದ ಕೊಳವೆ ಬಾವಿಗಳನ್ನು ಹೊಂದಿರುವ ಕುಟುಂಬಗಳು.
4. ಗ್ರಾಮೀಣ ಪ್ರದೇಶದಲ್ಲಿ ವಾರ್ಷಿಕ ರೂ. 12000–00 ಹಾಗೂ ಪಟ್ಟಣ ಪ್ರದೇಶದಲ್ಲಿ ವಾರ್ಷಿಕ ರೂ.17000–00 ಎಲ್ಲಾ ಮೂಲಗಳಿಂದ ಆದಾಯದ ಮಿತಿಗೆ ಒಳಪಟ್ಟ ಕುಟುಂಬಗಳು.
5. ಕುಟುಂಬದ ಸದಸ್ಯರು ಸರ್ಕಾರಿ / ಅರೆ ಸರ್ಕಾರಿ ಮತ್ತು ಸಾರ್ವಜನಿಕ ಉದ್ದಿಮೆಗಳ ನೌಕರರು ಇಲ್ಲದ ಕುಟುಂಬಗಳು ಮತ್ತು ಮಾಸಿಕ ಒಂದು ಸಾವಿರಕ್ಕಿಂತ ಕಡಿಮೆ ಆದಾಯವಿರುವ ಕುಟುಂಬಗಳು.
6. ಪೆಟ್ರೋಲ್ ಅಥವಾ ಡೀಸೆಲ್ ಚಾಲಿತ ವಾಹನಗಳನ್ನು ಹೊಂದಿಲ್ಲದ ಕುಟುಂಬಗಳು.
7. ದೂರವಾಣಿ ಅಥವಾ ಮೊಬೈಲ್ ಹೊಂದಿಲ್ಲದ ಕುಟುಂಬಗಳು.
8. ನೋಂದಾಯಿತ ಗುತ್ತಿಗೆದಾರರು / ಎ.ಪಿ.ಎಂ.ಸಿ. ವ್ಯಾಪಾರಸ್ಥರು / ಕಮಿಷನ್ ಏಜೆಂಟರುಗಳು, ಬಿತ್ತನೆ ಬೀಜ ಗೊಬ್ಬರಗಳ ವಿತರಕರು ಇತರೆ ವ್ಯಾಪಾರಿಗಳು ಇಲ್ಲದ ಕುಟುಂಬಳು.

ಊ) ಎಸ್.ಜಿ.ಆರ್.ವೈ. ವಿಶೇಷ ಘಟಕದಡಿಯಲ್ಲಿ ಜಿಲ್ಲಾಧಿಕಾರಿಗಳು / ರೆಗ್ಯುಲರ್ ಎಸ್.ಜಿ.ಆರ್.ವೈ ಘಟಕದಡಿಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಬಿಡುಗಡೆ ಮಾಡುವ ಅಕ್ಕಿಯನ್ನು ಜಿಲ್ಲೆಯ ಎಲ್ಲಾ ಅನುಷ್ಠಾನಾಧಿಕಾರಿಗಳಿಗೆ ಕಾರ್ಯಯೋಜನೆ ಪ್ರಕಾರ ಅಕ್ಕಿಯನ್ನು ಬಿಡುಗಡೆ ಮಾಡುವರು, ಅಂತಹ ಅಧಿಕಾರಿಗಳು ಪ್ರತಿ ಕೂಲಿಗಾರನಿಗೆ ದಿನಕ್ಕೆ ರೂ. 25.00 ನಗದು ಮತ್ತು 6 ಕೆ.ಜಿ. ಅಕ್ಕಿ ನೀಡುವರು.

ಋ) ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಗಮನಕ್ಕೆ ಬಂದಿಲ್ಲ.

ಋ) ಉದ್ಭವಿಸುವುದಿಲ್ಲ.

530(1224) ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ (ಕಲಘಟಗಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಧಾರವಾಡ ಜಿಲ್ಲೆಯ ಕಲಘಟಗಿಯಲ್ಲಿರುವ ಮಾರ್ಕೆಟಿಂಗ್ ಸೂಸೈಟಿಗಳ ಸಂಖ್ಯೆ ಎಷ್ಟು;

ಆ) ಈ ಮಾರ್ಕೆಟಿಂಗ್ ಸೊಸೈಟಿಯ ಜಾಗದ ವಿಸ್ತೀರ್ಣ ಎಷ್ಟು;

ಇ) ಇದನ್ನು ಅತಿಕ್ರಮಿಸಿ ಒತ್ತುವರಿ ಮಾಡಿರುವವರು ಯಾರು;

ಈ) ಅಂತಹವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಉ) ಈ ಅತಿಕ್ರಮದ ಜಾಗವನ್ನು ವಶಪಡಿಸಿಕೊಳ್ಳಲು ಸರ್ಕಾರ ಕೈಗೊಂಡ ಕ್ರಮಗಳೇನು;

ಊ) ಸದರಿ ಮಾರ್ಕೆಟಿಂಗ್ ಸೊಸೈಟಿಯ ಅಭಿವೃದ್ಧಿಗೆ ಸರ್ಕಾರ ಯಾವ ವಿಶೇಷ ಯೋಜನೆ ಹಮ್ಮಿಕೊಂಡು ಅನುಷ್ಠಾನಗೊಳಿಸಿದೆ (ವಿವರ ಒದಗಿಸುವುದು)?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘ ನಿಯಮಿತ ಎಂಬ ಒಂದು ಮಾರಾಟ ಸಹಕಾರ ಸಂಘ ಇರುತ್ತದೆ.

ಆ) 2 ಎಕರೆ 20 ಗುಂಟೆ.

ಇ) ಈ ಜಾಗವನ್ನು ಯಾರೂ ಅತಿಕ್ರಮಿಸಿ ಒತ್ತುವರಿ ಮಾಡಿರುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಸಂಘದ ಅಭಿವೃದ್ಧಿಗಾಗಿ ಸರ್ಕಾರ ಇದುವರೆವಿಗೂ ರೂ. 6,78,000–00 ಷೇರು ಬಂಡವಾಳ ತೊಡಗಿಸಿರುತ್ತದೆ.

531(1059) ಶ್ರೀ ದೇಸಾಯಿ ಶಿವಪುತ್ರಪ್ಪ ಮಡಿದಾಳಪ್ಪ (ಹೂವಿನ ಹಿಪ್ಪರಗಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) 2003–04ನೇ ಸಾಲಿನ ಬೆಳೆ ವಿಮೆ ಹಣವನ್ನು ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಬಿಡುಗಡೆ ಮಾಡಲಾಗಿದೆ;

ಆ) ಇದರಲ್ಲಿ ವಿಜಾಪುರ ಜಿಲ್ಲೆಗೆ ಬಿಡುಗಡೆ ಮಾಡಿದ ಹಾಗೂ ಬಿಡುಗಡೆಯಾಗಬೇಕಾಗಿರುವ ಹಣವೆಷ್ಟು;

ಇ) ಇಲ್ಲಿಯವರೆಗೆ ಹಣ ಬಿಡುಗಡೆಯಾಗದಿದ್ದಲ್ಲಿ ಬಿಜಾಪುರ ಜಿಲ್ಲೆಗೆ ಹಣವನ್ನು ತಕ್ಷಣವೇ ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳವುದೇ?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) 2003ನೇ ಮುಂಗಾರು ಹಂಗಾಮಿನಲ್ಲಿ ಒಟ್ಟು ರೂ. 272.32 ಕೋಟಿಗಳನ್ನು ರೈತರಿಗೆ ಇತ್ಯರ್ಥಪಡಿಸಲಾಗಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಇದರಲ್ಲಿ ಬಿಜಾಪುರದಲ್ಲಿ ಜಿಲ್ಲೆಗೆ ಬಿಡುಗಡೆ ಮಾಡಲಾದ ಬೆಳೆ ವಿಮಾ ನಷ್ಟ ಪರಿಹಾರ ಮೊತ್ತವು ರೂ. 48.02 ಲಕ್ಷಗಳು. 2003–04ನೇ ಹಿಂಗಾರು